ಇದು ಅನೇಕ ದಿನಗಳಿಂದ ಒಂದು ಸಮಸ್ಯೆಯನ್ನು ಅರಸುತ್ತಿತ್ತು; ಅದನ್ನು ವಿರೋಧಿಸಲು ಅಥವಾ ಧರಣಿ ಕೂರಲು ಅಥವಾ ಕಡೇ ಪಕ್ಷ ಬೆದರಿಕೆ ಹಾಕುವ ಅವಕಾಶಕ್ಕಾಗಿ ಕಾಯುತ್ತಿತ್ತು. ವಿರೋಧ ಪಕ್ಷ ಈ ಸಮಯವನ್ನು ಪಕ್ಕನೆ ಹಿಡಿಯಿತು.

ವಿರೋಧ ಪಕ್ಷದವರು ಹೇಳಿದರು, "ಬಡಪಾಯಿ ನಾಯಿಗಳು ಹಸಿವೆಯಾದಾಗ ಮಾತ್ರ ಕಚ್ಚುತ್ತವೆ. ಹೀಗಾಗಿ ನಮ್ಮ ಪಕ್ಷದವರಾದ ನೀವು ಅವುಗಳಿಗೆ ಆಹಾರ ಕೊಡುವ ವ್ಯವಸ್ಥೆಯನ್ನು ಆರಂಭಿಸಿ, ಆಗ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ."

ನಾಯಿಗಳ ಆತಂಕದಿಂದ ವ್ಯಗ್ರವಾಗಿದ್ದ ಪಕ್ಷ ಹೇಳುತ್ತಿತ್ತು, "ಜಾಸ್ತಿಯಾಯ್ತು, ಇನ್ನು ನಮ್ಮಿಂದ ಸಹಿಸಲಾಗದು. ಈ ನಾಯಿಗಳು ಎಲ್ಲರ ಬದುಕನ್ನು ನಾಶ ಮಾಡುತ್ತಿವೆ. ಈ ನಾಯಿಗಳು ಮನುಷ್ಯರಂತೆ ಭೇದಭಾವ ಮಾಡುವುದಿಲ್ಲ. ಈ ನಾಯಿಗಳು ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿ ಅಥವಾ ಅತಿಥಿಗಳೆಂದು ನೋಡದೆ ಎಲ್ಲರಿಗೂ ಕಚ್ಚುತ್ತವೆ. ಇದರಿಂದಾಗಿ ಕಾಲೇಜಿನಲ್ಲಿ ಭಯದ ವಾತಾವರಣವಿರುತ್ತದೆ. ಅಲ್ಲದೆ ಇವು ಸಾಮಾನ್ಯವಾಗಿ ತರಗತಿಯೊಳಗೂ ಹೋಗುತ್ತವೆ. ಆಗ ನಾವು ವಿದ್ಯಾರ್ಥಿಗಳಿಗೆ ಪಾಠ ಹೇಳುವುದೋ ಅಥವಾ ನಾಯಿಗಳಿಗೆ ಪಾಠ ಹೇಳುವುದೋ?" ಈ ಮಾತಿಗೆ ಇಡೀ ನಾಯಿ ಸಮಿತಿ ಗಟ್ಟಿಯಾಗಿ ನಕ್ಕಿತು.

ನಾಯಿ ಸಮಿತಿ ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಈ ಬಗ್ಗೆ ವಿಚಾರ ಮಾಡಲು ಒಂದು ಉಪ ಸಮಿತಿಯನ್ನು ರಚಿಸಿತು. ಉಪ ಸಮಿತಿಯ ಸದಸ್ಯರು ಅಧ್ಯಯನ ಮತ್ತು ಆವಿಷ್ಕಾರದ ನಂತರ, ವಿದೇಶಗಳಲ್ಲಿ ಈ ಸಮಸ್ಯೆ ಇಲ್ಲ ಎಂಬುವುದನ್ನು ಪತ್ತೆ ಹಚ್ಚಿದರು. ಆಗ ಕೆಲವು ತಿಳಿವಳಿಕಸ್ತ ಸದಸ್ಯರು, ವಿದೇಶಕ್ಕೆ ಹೋಗಿ ಈ ಸಮಸ್ಯೆಗೆ ಪರಿಹಾರವನ್ನು ಹೇಗೆ ಮಾಡಲಾಗಿದೆ ಎಂಬುವುದನ್ನು ತಿಳಿಯುವಂತೆ ಸಲಹೆಯಿತ್ತರು. ಎಲ್ಲಾ ಸದಸ್ಯರು ತಿಳಿವಳಿಕಸ್ತ ಸದಸ್ಯರ ತಿಳಿವಳಿಕೆಯಿಂದ ಖುಷಿಗೊಂಡು ಅವರನ್ನು ತಬ್ಬಿಕೊಂಡರು. ನಾಯಿ ಸಮರ್ಥಕರು ಮತ್ತು ನಾಯಿ ವಿರೋಧಿಗಳು ಈ ವಿಷಯದ ಬಗ್ಗೆ ಒಮ್ಮತಾಭಿಪ್ರಾಯವನ್ನು ಹೊಂದಿದ್ದರು. ಅವರು ಧ್ವನಿಮತದಿಂದ ಈ ಪ್ರಸ್ತಾವವನ್ನು ಅಂಗೀಕರಿಸಿದರು.

ವಿದೇಶ ಯಾತ್ರೆಗೆ ತಮಗೆ ಬೇಕಾದ ಸದಸ್ಯರನ್ನೂ ಕರೆದೊಯ್ಯಬಹುದು ಎಂಬ ಷರತ್ತಿಗೊಳಪಟ್ಟು ಪ್ರಾಂಶುಪಾಲರು ವಿದೇಶ ಪ್ರಯಾಣಕ್ಕೆ ಅನುಮತಿಯನ್ನು ಕೊಟ್ಟರು. ಭಾರತದಲ್ಲಿ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲು ಒಮ್ಮೊಮ್ಮೆ ಕತ್ತೆಯನ್ನು ಸಹ ಕುದುರೆಯನ್ನಾಗಿ ಮಾಡಬೇಕಾಗುತ್ತದೆ. ಉಪ ಸಮಿತಿ ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲು ಏನನ್ನೂ ಮಾಡಲು ಸಿದ್ಧವಿತ್ತು. ಸರಿ, ಎಲ್ಲಾ ಸದಸ್ಯರ ಒಪ್ಪಿಗೆಯನ್ನು ಪಡೆದು ಈ ಪ್ರಯಾಣ ರಹಸ್ಯವಾಗಿ ಆರಂಭವಾಯಿತು. ಉಪ ಸಮಿತಿ ಅನೇಕ ದೇಶಗಳಲ್ಲಿ ಪ್ರಯಾಣ ಮಾಡಿತು; ಅದು ಮರಳಿ ಬಂದು ವರದಿ ಸಲ್ಲಿಸಿತು: 'ಅಲ್ಲಿಯ ನಾಯಿಗಳು ವಿದ್ಯಾವಂತ ನಾಯಿಗಳು. ಅವು ಲಿಖಿತ ಆದೇಶವಿದ್ದವರಿಗೆ ಮಾತ್ರ ಕಚ್ಚುತ್ತವೆ. ಆದ್ದರಿಂದ ಭಾರತದಲ್ಲಿ ಸಹ ಎಲ್ಲಾ ನಾಯಿಗಳಿಗೆ ವಿದ್ಯಾಭ್ಯಾಸ ಮಾಡಿಸಬೇಕು, ಅವುಗಳಿಗೆ ವಿಶೇಷ ತರಬೇತಿ ಕೇಂದ್ರಗಳನ್ನು ತೆರೆಯಬೇಕು. ಅವುಗಳಿಗೆ ಲಿಖಿತ ಆದೇಶ ಕೊಡದವರೆಗೆ, ಅವು ಯಾರಿಗೂ ಕಚ್ಚುವುದಿಲ್ಲ. ನಾಯಿಗಳ ಮೇಲೆ ದಬ್ಬಾಳಿಕೆ ಮಾಡಬಾರದು, ಅವುಗಳಿಗೆ ತೊಂದರೆ ಕೊಡಬಾರದು. ಅವುಗಳ ಹಕ್ಕುಗಳನ್ನು ಸಹ ಕಸಿಯಬಾರದು, ಅವು ಗೌರವದಿಂದ ಜೀವನವನ್ನು ಸಾಗಿಸಬೇಕು.'

ಉಪಸಮಿತಿಯ ಈ ವರದಿಯನ್ನು ಓದಿ ಎಲ್ಲರಿಗೂ ಆಶ್ಚರ್ಯವಾಯಿತು. ಇದುವರೆಗೆ ಈ ದೇಶದಲ್ಲಿ ಎಲ್ಲಾ ಮಕ್ಕಳ ವಿದ್ಯಾಭ್ಯಾಸಕ್ಕೆ ಉಚಿತ ವ್ಯವಸ್ಥೆಯೇ ಸಾಧ್ಯವಾಗಿಲ್ಲ, ಇನ್ನು ನಾಯಿಗಳಿಗೆ ಹೇಗೆ ಸಾಧ್ಯ! ಈ ವರದಿಯನ್ನು ಸರ್ವಸಮ್ಮತಿಯಿಂದ ರದ್ದು ಪಡಿಸಲಾಯಿತು. ನಾಯಿ ಸಮಿತಿಯ ಸದಸ್ಯರು ವರದಿಯನ್ನು ರದ್ದು ಪಡಿಸಿದ್ದಕ್ಕೆ ಘೋರ ವಿರೋಧವನ್ನು ವ್ಯಕ್ತಪಡಿಸಿದರು, ಇವರಲ್ಲಿ ಕೆಲವರಿಗೆ ವಿದೇಶಕ್ಕೆ ಹೋಗುವ ಅವಕಾಶ ಲಭಿಸಿರಲಿಲ್ಲ, ಅವರ ಕೂಗು ಯಾರಿಗೂ ಕೇಳಿಸಲೇ ಇಲ್ಲ. ಸಮಿತಿ ಮತ್ತೆ ಹೊಸದಾಗಿ ಸಮಸ್ಯೆಯ ಪರಿಹಾರಕ್ಕಾಗಿ ಪ್ರಯತ್ನವನ್ನು ಆರಂಭಿಸಿತು; ಆಗಲೇ ನಾಯಿ ಸಮಿತಿಯ ಸದಸ್ಯನೊಬ್ಬನನ್ನೇ ನಾಯಿಯೊಂದು ಕಾಲೇಜಿನಲ್ಲಿ ಕಚ್ಚಿತು. ಈಗ ಅವರಿಗೆ 'ಬಡವನ ದುಃಖ ಶ್ರೀಮಂತನಿಗೇನು ಗೊತ್ತು?' ಎಂಬ



